ಕಡೂರು ಡಿಸ್ಟ್ರಿಕ್ಟು.

ತಾರೀಖು 16ನೇ ಮಾರ್ಚೀ 1885.

ಇದರಿಂದ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ಮತ್ತು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೆ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಕ್ತಾರೀಕ ಯಾ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ರಿಜಿಸ್ಟ್ರಾರ್ ಯಾ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸುತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರೆಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1 1882—83	ನರಶಿಮ್ಹಶಾಸ್ತ್ರಿ, ಸೀತಾರಾಮಶಾಸ್ತ್ರಿ ಕೊಪ್ಪ ತಾಲ್ಲೂಕು ಹೆದಕಣಗಾರ ಯರಡನೇ ಬುಮದವಾಸಸ್ಥರು ಕ್ಕಿನ ಬಾಬತು.	ರುದ್ರಪ್ಪಶೆಟ್ಟಿ, ಕಲ್ಲಪ್ಪಶೆಟ್ಟಿ, ಚಿಕ್ಕಮಗಳೂರು ವಾವಿನಕೆರೆ ವಾಸಸ್ಥರು	16—10—82	20—2—83 ತಿರಸ್ಕರಿಸಿ ದ್ಯಾಕ್ಟು	ತಮ್ಮಗಳ ಮೇಲೆ ಬಾಕೀ ಆಗುವ 17,500 ರೂಪಾಯಿಗಳನ್ನು ವರುಷ ಒಂದಕ್ಕೆ 875 ರೂಪಾಯಿಗಳ ಮೇರಿಗೆ 20 ಕಂತುಗಳಿಂದ ಪಾವತೀ ಮಾಡುವದಾಗಿಯೂ ಇದಕ್ಕಾಗಿ ಸಳ್ಳಿಬೈಲ್, ಅಂಡಗುಳಿ, ಕೂಳೂರು, ಬಳವನಕುಡಿಗೆ, ಕಾರಮನೆಈ ಗ್ರಾಮಗಳಲ್ಲಿರತಕ್ಕ ಥರೀ, ಖುಷ್ಕಿ, ಬಾಗಾಯತು ಸಹಾ ಆಧಾರಮಾಡಿರುವದಾಗಿ ವಗ್ಯೆರೆ.
401 1881—82	ಸಕ್ಕರೆಪಟ್ಟಣ ಖಾನುಭಾನ ರಂಗಪ್ಪ	ಯಡತೊರೆ ತಾಲ್ಲೂಕು ಹೆಡ್ ಗುಮಾಸ್ತ ನಾರಾಯಣಪ್ಪ	10—3—82	10—3—82	ಬಂಡಗ ಗ್ರಾಮದಲ್ಲಿರುವ ಸರ್ವೆ ನಂಬರ್ 90ನೇ ಗದ್ದೆಯನ್ನು 100 ರೂಪಾಯಿಗಳಿಗೆ ಕ್ರಯ.
239 1882—83	ಹೊಂಬೈಲ್ ಲಿಂಗೇಗೌಡನ ಮಗ ಲಿಂಗೇಗೌಡ	ಮೈಲಿಮನೆ ದಾಖಲೆ ಹೊನಹಳ್ಳಿ ಪೇಟೇಲಿರುವ ಖಾಜೆ ಕರಿಂಸಾಬಿ ಮಗ ಅಬ್ದುಲ್ ರಸೂಲ್ ಸಾಹೆಬ್	31—8—82	31—8—82	ತನ್ನ ಲಗ್ನದ ಬಗ್ಗೆ ಒಂದುನೂರು ರೂಪಾಯಿ ತೆಗದುಕೊಂಡು ಇರುವದ್ದರಿಂದ ಇದರ ಬಡ್ಡಿಗಾಗಿ 1883ನೇ ಇಸವಿ ಮಾರ್ಚಿ ತಾರೀಖು 15ಕ್ಕೆ ಪಸನಾದ ಕಾಫಿಬೀಜ 6 ಮಣವ್ವು ಅಸಲ ಮೊಬಲಗು ಸುದಾ ಪಾವತಿ ಮಾಡುವದಲ್ಲದೆ ಇದಕ್ಕಾಗಿ ಬಸಗೋಡು ದಾಖಲೆ ಹೊಂಬೈಲ್ ಗ್ರಾಮದಲ್ಲಿರುವ ಕಾಫೀತೋಟ ಒಂದು ಥರೀ ಜಮೀನ್ ಎರಡು (ಸ ಹಾ ತೋರಡವು ಮಾಡಿರುವದಾಗಿ.
1 -83	ಬೆಳವಾಡಿ ಪೈಕೀ ನರಸೀಪುರದಲ್ಲಿರುವ ಪುಟ್ಟಮ್ಮ ಡತಿಬೀ	ಳಳಸಾಪುರದಲ್ಲಿರುವ ಕಾಡಯ್ಯನವರ ಹಿರೆಂಣಯ್ಯನಮಗ ಹಿರಿಯಂಣಯ್ಯ	24—2—83	24—2—83	68 ರೂಪಾಯಿ ತನ್ನಿಂದ ಸಲ್ಲತಕ್ಕದ್ದನ್ನ ತೀರಿಸುವ ವರಿಗೆ ಇದರ ಬಡ್ಡಿಗಾಗಿ ಸೂರಗೊಂಡನಹಳ್ಳಿಯಲ್ಲಿ ತನ್ನ ಭಾವ ಮಲ್ಲೂರಿ ಹೆಸರಿನ ವರ್ಗರ ಬಾಬತು ತನ್ನ ಗಂಡನ ಹಿಸ್ಸೆಗೆ ಬಂದ ಮೂರು ಖುಷ್ಕಿ ಜಮೀನುಗಳು ಭೋಗ್ಯಕ್ಕೆ ಕೊಟ್ಟರುವದಾಗಿ.
	ಬೇರವಳ್ಳಿಯಲ್ಲಿರುವ ಸೇಹುರ್ಸೇಸಾಬಿ ಮಗ ಸೈದಾರಯದ್‌ಸಾಬಿ ಅಂಣಾ.		6—6—81	1—3—82 ತಿರಸ್ಕರಿಸಿ ದ್ಯಾಕ್ಟು	ಕಡೂರು ಡಿಸ್ಟ್ರಿಕ್ಟು ಜಡಿಷಿಯಲ್ ಅಸಿಸ್ಟೆಂಟ್ ಕೋರ್ಟು ಸ್ಯ 1878ನೇ ಇಸವಿ ಅಮಲಜಾರೀ ನಂ. 44ನೇ ಪ್ರತಿವಾದಿ ದೊಡ್ಡಣಿದ್ದಪ್ಪನಿಂದ ಸಲ್ಲತ್ತ ಹಣಕ್ಕಾಗಿ ಆದ ಹರಾಜಿನಲ್ಲಿ ತಾನು ಹೊಂದಿ ಸರ ಟಿಫಿಕೇಟ್ ಪಡವ ಬೇರವಳ್ಳಿ ದಾಖಲೆ ಹೊರಕೇರಿಲಿರುವ ಪ್ರತಿವಾದಿ ಬಾಬತು 3 ಬೂಂದು ತೋಟುಗಳನ್ನ 400 ರೂಪಾಯಿಗೆ ಕ್ರಯಕ್ಕೆ ಕೊಟ್ಟರುವದಾಗಿ.

ಮಹಮ್ಮದಲ್ಲಿ, ಕೆ. ಬಿ.
ರಿಜಿಸ್ಟ್ರಾರ್.